**ಅಸಲು ದಾವೆ ಸಂಖ್ಯೆ -144/2022**
**ಪಿ.ಡಬ್ಲ್ಯೂ- 1**

**ದಿನಾಂಕ 05-03-2024 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ.ವಾಯ್.ಎಮ್.ಎಚ್ ವಕೀಲರಿಂದ ವಾದಿ ಪರವಾಗಿ**

ನಾನು ಈಗ ದಿಃ13.10.2017 ರ ಒಪ್ಪಿಗೆ ಪತ್ರದ ಮೂಲ ಪ್ರತಿ ಹಾಜರಪಡಿಸಿದ್ದೇನೆ. (ಸದರಿ ದಾಖಲಾತಿಗೆ ಕಲಂ.41 ರ ಪ್ರಕಾರ ಡೆಪ್ಯೂಟಿ ಕಮಿಷನರ್ ಆಪ್ ಸ್ಟಾಂಪ್ ಬಾಗಲಕೋಟೆರವರು ಮುದ್ರಾಂಕ ಶುಲ್ಕ ಮತ್ತು ದಂಡ ವಸೂಲಾತಿ ಮಾಡಿದ ಕಾರಣ ಸದರಿ ದಾಖಲಾತಿಯನ್ನು ನಿಶಾನೆ ಎಂದು ಗುರುತಿಸಲಾಯಿತು) ಸದರಿ ದಾಖಲಾತಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ಬಾಳುಸಾಬ ಸರಕಾವಸ್ ಇವರು ಹೆಬ್ಬೆಟ್ಟಿನ ಗುರುತು, ಸಾಕ್ಷಿದಾರರಾಗಿ ಹಣಮಂತ ತುಳಸಿಗೇರಿ, ಮೀರಾಸಾಬ ಹೊಸಕೋಟಿ ಮತ್ತು ಸೈದುಸಾಬ ಸರಕಾವಾಸ್ ಮತ್ತು ಮಹ್ಮಮ್ಮದಸಾಬ ಸರಕಾವಸ್‌ರವರು ಸಹಿ ಮಾಡಿರುತ್ತಾರೆ. ದಸ್ತು ಬರಹಗಾರರಾಗಿ ಅಂಗಡಿರವರು ಸಹಿ ಮಾಡಿರುತ್ತಾರೆ. ಆದ್ದರಿಂದ ದಾವೆಯಲ್ಲಿ ಕೋರಿದಂತೆ ಡಿಕ್ರಿ ಆಗಬೇಕಾಗಿ ವಿನಂತಿ.

ಪ್ರತಿವಾದಿ ಪರ ವಕೀಲರು ಗೈರು ಹಾಜರ ಇದ್ದು, ಯಾವುದೇ ಪ್ರತಿವಾದ ಪತ್ರ ಸಲ್ಲಿಸಿದ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ . ಹೇ. ಕೆ . ಸರಿ ಅದೆ .

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ